





# ಹಿಂಗಾರಿ ಕರಿ ಹೆಸರು



**ಜವಾರಿ ತಳಿಯ ಕರಿ ಹೆಸರನ್ನು ಬಿತ್ತುವುದು ಹಾವೇರಿ, ಹಾನಗಲ್ಲ, ಶಿಗ್ಗಾಂವಿ ಭಾಗದಲ್ಲಿ, ಅದೂ ಹಿಂಗಾರಿ ಹಂಗಾಮಿನಲ್ಲಿ ಎಂದಿನಿಂದಲೂ ನಡೆದುಬಂದಿದೆ. ಲಾಭ ಕಮ್ಮಿ ಎಂದು ರೈತರು ಉದಾಸೀನತೆ ಮಾಡಿದ್ದರೆ ಈ ಅಪ್ಪಟ ಜವಾರಿ ತಳಿಯೂ ಹೇಳ ಹೆಸರಿಲ್ಲದೆ ಎಂದೋ ಇತಿಹಾಸ ಪುಟ ಸೇರುತ್ತಿತ್ತು.**

■ ಚಿತ್ರ ಬರಹ:
**ಆರ್. ಎಸ್. ಪಾಟೀಲ**

ಹೆಸರಿಗೆ ಇನ್ನೊಂದು ಹೆಸರೇ ಹಸಿರು. ಆದರೆ ಕರಿ ಹೆಸರೂ ಕೂಡಾ ಇದೆ. ಹೆಸರು ಬೇಸಾಯಕ್ಕೆ ಮುಂಗಾರು ಮಾನ್ಸೂನ್ ಹಂಗಾಮು ಅನ್ನುವುದು ಅಷ್ಟೇ ಜಗಜ್ಜಾಹೀರು. ಆದರೆ ಈ ಕರಿ ಹೆಸರನ್ನು ಹಿಂಗಾರು ಬೇಸಿಗೆ ಹಂಗಾಮಿನಲ್ಲಿ ಬೆಳೆಯಲಾಗುತ್ತಿರುವುದು ಕೂಡಾ ವಿಶೇಷ.

ಅಪರೂಪದ ಈ ಕರಿ ಹೆಸರನ್ನು ಹಾವೇರಿ ಜಿಲ್ಲೆಯ ಹಾನಗಲ್ಲ, ಶಿಗ್ಗಾಂವಿಯ ಕೆಲ ಭಾಗದಲ್ಲಿ ಕಾಣಬಹುದು. ಹಾನಗಲ್ಲ, ಶಿಗ್ಗಾಂವಿಯ ಭಾಗದಲ್ಲಿ ಕಣ್ಣು ಹರಿಸಿದಷ್ಟು ದೂರ ಭತ್ತದ ಗದ್ದೆಗಳೇ ಕಂಡುಬರುತ್ತಿದ್ದ ಕಾಲವೊಂದಿತ್ತು. ಮುಂಗಾರು ಮಳೆ ಕಮ್ಮಿಯಾಗುತ್ತಿದ್ದಂತೆ ಭತ್ತದ ಗದ್ದೆಗಳೂ ಕ್ರಮೇಣ ಕಮ್ಮಿಯಾಗುತ್ತಿವೆ. ಈ ಪ್ರದೇಶದಲ್ಲಿ ಹತ್ತಿ, ಮೆಕ್ಕೆ ಜೋಳಗಳು ಕೇಕೆ ಹಾಕುತ್ತಿರುವುದು ಇತ್ತೀಚಿನ ಬೆಳವಣಿಗೆ.

ಅದೇನೆ ಇರಲಿ, ಮುಂಗಾರಿನಲ್ಲಿ ಬಿತ್ತಿದ ಭತ್ತ, ಹತ್ತಿ, ಜೋಳ ಹಾಳಾಗುವುದು ನವೆಂಬರ್– ಡಿಸೆಂಬರಿನಲ್ಲಿ. ಖಾಲಿಯಾದ ಹೊಲ ಗದ್ದೆಗಳನ್ನು ರಂಟೆ ಕುಂಟೆ ಹೊಡೆದು ಹಿಂಗಾರಿ ಹೆಸರಿನ ಬೇಸಾಯಕ್ಕೆ ಬಳಸಿಕೊಳ್ಳುತ್ತಿರುವುದು ಇಲ್ಲಿನ ರೈತರ ಜಾಯಮಾನ.

ಹಾಗೆ ನೋಡಿದರೆ ಹಿಂಗಾರಿ ಹೆಸರು ಅಂತಹ ಲಾಭದಾಯಕ ಬೆಳೆಯೂ ಅಲ್ಲ. ಹಾಗಂತ ಇದನ್ನು ಬೆಳೆಯಲು ಇಲ್ಲಿನ ರೈತರು ಹಿಂದೇಟು ಹಾಕಿಲ್ಲ. ಅದೇ ಇಲ್ಲಿನ ರೈತರ ದೊಡ್ಡ ಗುಣವೆನ್ನಬೇಕು. ಉದಾಸೀನ ತೋರಿದ್ದರೆ ಈಗಾಗಲೇ ಕಣ್ಮರೆಯಾಗಿರುವ ಅದೆಷ್ಟೋ ಜವಾರಿ ತಳಿಗಳ ಪಟ್ಟಿಗೆ ಹಿಂಗಾರಿ ಹೆಸರು ಕೂಡಾ ಸೇರುತ್ತಿತ್ತು. ಬಿತ್ತನೆಗೆ ನವೆಂಬರ್– ಡಿಸೆಂಬರ್ ಸಕಾಲ. ಎಕರೆಗೆ 3–4 ಕೆ. ಜಿ. ಬೀಜವನ್ನು ಕೂರಿಗೆಯಿಂದ ಇಲ್ಲವೇ ಉಳುಮೆ ಮಾಡಿದ ಹೊಲದಲ್ಲಿ ಕೈಯಿಂದ ಸಮನಾಗಿ ಉಗ್ಗಿ ಕುಂಟೆ ಹೊಡೆದು ಬಿತ್ತನೆ ಮಾಡುವ ಪದ್ಧತಿ ರೂಢಿಯಲ್ಲಿದೆ. ಅನುಕೂಲಸ್ಥರು 1–2 ಬಾರಿ ನೀರು ಹಾಯಿಸುವುದೂ ಇದೆ. ಬಹುತೇಕ ಬಯಲು ನೆಲದ ಬೆಳೆಯಾಗಿ ಬೆಳೆಯುವುದೇ ಬಳಕೆಯಲ್ಲಿದೆ.

ಚಳಿಗಾಲ– ಬೇಸಿಗೆ ಕಾಲದಲ್ಲಿ ರೋಗ ರುಜಿನಗಳ ಕಾಟ ಕಮ್ಮಿ. ಮೇಲಾಗಿ ಅಪ್ಪಟ ದೇಸಿ ತಳಿ ಇರುವುದರಿಂದ ರೋಗ ನಿರೋಧಕ ಗುಣ ತಳಿ ಗುಣದಲ್ಲಿ ಬಂದಿರುವುದು ಬಳುವಳಿಯಾಗಿದೆ. ಹೀಗಾಗಿ ಅಂತಿಂತಹ ರೋಗ ರುಜಿನಗಳು ಇದನ್ನು ಭಾದಿಸುವ ಭಯವೂ ಇಲ್ಲ. ಬೀಜ ಬಿತ್ತುವಾಗ ಅಥವಾ ಬೆಳೆಯುವಾಗ ಗೊಬ್ಬರದ ಉಸಾಬರಿಗೇ ಹೋಗುವುದಿಲ್ಲ. ಕಳೆ ಕಸ ಖರ್ಚಿಗೂ ತಲೆ ಕೆಡಿಸಿಕೊಳ್ಳುವಂತಿಲ್ಲ. ಎಕರೆಗೆ 3–4 ಕೆ.ಜಿ. ಬಿತ್ತನೆ ಬೀಜ, ಕಟಾವಿನ ಖರ್ಚು ಬಿಟ್ಟರೆ ಮತ್ತಾವ ಹೆಚ್ಚಿನ ಹೊರೆಯನ್ನೂ ಹಿಂಗಾರಿ ಹೆಸರು ಕೇಳುವುದಿಲ್ಲ.

ಕಟಾವು ಒಕ್ಕಲು ಕೂಡಾ ಅಷ್ಟೆ ಸುಲಭ. ಮುಂಗಾರು ಹೆಸರಿನಂತೆ ಕಾಯಿ ಬಿಡಿಸುವುದಿಲ್ಲ. ಮಾಗಿದ ಗಿಡಗಳನ್ನೇ ಕಿತ್ತು ಕಣದಲ್ಲಿ ಎತ್ತಿನ ಕಾಲಿಗೆ ಹಾಕಿ ತುಳಿಸಿ ತೂರಿದರಾಯ್ತು– ಒಕ್ಕಲು ಮುಗಿದಂತೆ. ಎಕರೆಗೆ 1–2 ಕ್ವಿಂಟಾಲ್ ಇಳುವರಿ ಇದೆಯೆಂದು ಇಲ್ಲಿನ ರೈತರು ತಿಳಿಸುತ್ತಾರೆ.

ಇದಕ್ಕಿರುವ ವಿಶಿಷ್ಟ ಸ್ವಾದ ರುಚಿಯಿಂದಾಗಿ ಇಲ್ಲಿನ ಜನ ಈ ಹೆಸರಿಗೆ ಮಾರು ಹೋದಂತಿದೆ. ಕಾಳಿಗೂ ಬೇಗ ಹುಳ ಹತ್ತುವಂತಿಲ್ಲ. ಇದರಿಂದಾದ ಸಾರು, ಪಲ್ಯ ಬೇಗ ಹಳಸುವುದಿಲ್ಲ. ಹೀಗಾಗಿ ಮಹಿಳೆಯರಿಗೂ ಬಲು ಅಚ್ಚುಮೆಚ್ಚು ಈ ಹಿಂಗಾರಿ ಕರಿ ಹೆಸರು. ●